2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ. ಸಿ. ನಂ.ಃ1258/16**

| | |
|---|---|
| ಆರೋಪಿಯ ಹೆಸರು | ಉಮೇಶ ಬಿನ್ ಮಹದೇವು, 35 ವರ್ಷ, |
| ವಾಸ್ತವ್ಯ | ಗೊದ್ದನಪುರ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ ನಂಜನಗೂಡು ತಾಲ್ಲೂಕು. |

ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ 1ಃ ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

ಪ್ರಶ್ನೆ 2ಃ ಫ್ರಾಸಾ-1 ಮಲ್ಲೇಗೌಡ, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಫ್ರಾಸಾ-1 ರವರು ಪರಿಚಯಸ್ಥರಾಗಿದ್ದು ಹಾಗೂ ಒಂದೇ ಊರಿನವರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ದರದು ನಿಮಿತ್ತ ಅಂದರೆ ಕುಟುಂಬದ ನಿರ್ವಹಣೆಗಾಗಿ ಹಾಗೂ ಕೈಸಾಲವನ್ನು ತೀರಿಸಿಕೊಳ್ಳುವ ಸಲುವಾಗಿ ಫಿರ್ಯಾದುದಾರರನ್ನು ದಿಃ03.12.2015 ರಂದು ಭೇಟಿ ಮಾಡಿ ರೂ.5,00,000/-ಗಳನ್ನು ಪಡೆದುಕೊಂಡು 02 ತಿಂಗಳೊಳಗಾಗಿ ಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 3 ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರು ಶಾಖೆಯ ಚೆಕ್ ನಂಃ035538 ಅನ್ನು ದಿ.24.03.2016 ಗೆ ರೂ.5,00,000/- ಎಂದು ನಮೂದಿಸಿ ಫ್ರಾಸಾ-1 ರವರಿಗೆ ನೀಡಿದ್ದು ಸದರಿ ಚೆಕ್ಕನ್ನು ಫ್ರಾಸಾ-1 ರವರು ನಗದೀಕರಣ ಪಡಿಸಲು ಅವರ ಖಾತೆಯಿರುವ ಇಂಡಿಯಾನ್ ಓವರ್ಸೀಸ್ ಬ್ಯಾಂಕ್, ನಂಜನಗೂಡು ಶಾಖೆಗೆ ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿ.12.04.2016 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 4 ಫ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ ದಿಃ20.04.2016 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸನ್ನು ಆರೋಪಿಯಾದ ನೀವು ಬೇಕಂತಲೇ ಸ್ವೀಕರಿಸದೇ ತಪ್ಪಿಸಿಕೊಂಡಿದ್ದು, ಈ ರೀತ್ಯಾ ನೀವು ಹಣವನ್ನು ಮರುಪಾವತಿ ಮಾಡದೆ ಕಲಂ

138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ 5ಃ ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ 6ಃ ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ05.12.2022 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು